ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶುಕ್ರವಾರ, ೨೨ನೇ ಮಾರ್ಚ್ ೧೯೯೧ ಚೈತ್ರ ೧, ಶಕ ೧೯೧೩

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯.೫೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.

ನಿಲುವಳಿ ಸೂಚನೆ ಪ್ರಸ್ತಾಪ

ರಾಜ್ಯಪಾಲರು ಒಂದು ಖಾಸಗಿ ಸಭೆಯಲ್ಲಿ ಭಾಗವಹಿಸಿರುವ ಕುರಿತು.

ಶ್ರೀ ಕೆ.ಎಸ್. ಈಶ್ವರಪ್ಪ : ಕರ್ನಾಟಕ ಮಾನ್ಯ ರಾಜ್ಯಪಾಲರ ಬಗ್ಗೆ. ತಮ ಗಮನಕ್ಕೆ ಬಂದಿರಬಹುದು.

***

ಅಧ್ಯಕ್ಷರು : ನಿಮಗೆ ನಾನು ಮಾತನಾಡಲಿಕ್ಕೆ ಅನುಮತಿ ಕೊಟ್ಟಿಲ್ಲವಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ ವಿಷಯ ಬಹಳ ಗಂಭೀರವಾದುದು.

ಅಧ್ಯಕ್ಷರು : ನಾನು ನಿಮಗೆ ಮಾತನಾಡಲಿಕ್ಕೆ ಅನುಮತಿ ಕೊಟ್ಟಿದ್ದೇನೆಯೇ? ವಿಷಯ ಏನೇ ಇರಲಿ, ನಾನು ತಮ್ಮನ್ನು ಕರೆದಾಗ ನಿಂತು ಹೇಳಿದರೆ ಉಚಿತ ಇರುತ್ತದೆ. ನಾನು ಬಂದು ಕುಳಿತೆ ನೀವು ಪ್ರಾರಂಭಿಸಿದಿರಿ.

ಶ್ರೀ ಕೆ.ಎಸ್. ಈಶ್ವರಪ್ಪ : ಇದು ಬಹಳ ಮಹತ್ವದ ವಿಷಯ ಇರುವುದುರಿಂದ ಇದರ ಬಗ್ಗೆ ಚರ್ಚೆ ಮಾಡುತ್ತಿದ್ದೇನೆ.

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

ಅಧ್ಯಕ್ಷರು : ನಿಮ್ಮ ನಿಲುವಳಿ ಸೂಚನೆ ಮಾನ್ಯ ರಾಜ್ಯಪಾಲರಿಗೆ ಸಂಬಂಧಪಟ್ಟಿರುವುದರಿಂದ ರಾಜ್ಯಪಾಲರ ವಿಚಾರದಲ್ಲಿ ಯಾವುದೇ ವಿಧವಾದ ನಿಲುವಳಿ ಸೂಚನೆಯನ್ನು ಚರ್ಚೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಅದನ್ನು ತಿರಸ್ಕರಿಸಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ..... ***

ಅಧ್ಯಕ್ಷರು : ತಿರಸ್ಕರಿಸಿದ ಮೇಲೆ ಆ ಪ್ರಶ್ನೆಯನ್ನು ಪುನಃ ಎತ್ತುವುದಕ್ಕೆ ಅವಕಾಶ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ಇದನ್ನು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇವೆ.

ಅಧ್ಯಕ್ಷರು : ಅವರು ರಾಜ್ಯಪಾಲರ ಬಗ್ಗೆ ಹೇಳಿರತಕ್ಕದ್ದು ರೆಕಾರ್ಡ್‌ಗೆ ಹೋಗಬೇಕಾಗಿಲ್ಲ.

ಶ್ರೀ ಬಿ.ಎಂ. ಇದಿನಬ್ಬ : ಅನಾವಶ್ಯಕವಾಗಿ ಈ ಸಮಸ್ಯೆ ತಂದುಹಾಕಿದ್ದಾರೆ.

ಅಧ್ಯಕ್ಷರು : ಶ್ರೀ ಜಾಲಪ್ಪ.

ಶ್ರೀ ಆರ್.ಎಲ್. ಜಾಲಪ್ಪ : ಸಹಕಾರ ಮಂತ್ರಿಗಳಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ : ಅಧ್ಯಕ್ಷರೆ, ಎರಡನೇ ಕಾಲಿಂಗ್ ಅಟೆನ್‌ಷನ್ ತೆಗೆದುಕೊಳ್ಳಬಹುದು.

ಗಮನ ಸೆಳೆಯುವ ಸೂಚನೆಗಳು

1) ಕಿಂಕೋ ಕಾರ್ಖಾನೆಯ ಕಾರ್ಮಿಕರಿಗೆ ಕಳೆದ ಎರಡು ತಿಂಗಳಿಂದ ವೇತನ ಇಲ್ಲದೆ ತೊಂದರೆಯಲ್ಲಿರುವುದು.

ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ, ಕಿಂಕೋ ಕಾರ್ಖಾನೆಯ ಕಾರ್ಮಿಕರಿಗೆ ಕಳೆದ ಎರಡು ತಿಂಗಳಿಂದ ವೇತನ ಇಲ್ಲದೆ ತೊಂದರೆಯಲ್ಲಿರುವ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು) : 1975ರಲ್ಲಿ 'ಕಿಂಕೋ' ಕಂಪೆನಿಯು ಸ್ಥಾಪಿತವಾಗಿದ್ದು, ಮೊದಲು ಇಲಾಖೆ ಮತಿಯಿಂದ ನಡೆಸಲಾಗುತ್ತಿರುವ ಬೆಂಗಳೂರಿನ ಸರಕಾರಿ ಇಂಡಸ್ಟ್ರಿಯಲ್ ವರ್ಕ್‌ಷಾಪ್ ಹಾಗೂ ಹಾಸನ ಮೈಸೂರು ಇಂಪ್ಲಿಮೆಂಟ್ಸ್ ಫ್ಯಾಕ್ಟರಿಗಳ ಸಂಯೋಜನೆಯಾಗಿದೆ. 1986ರ ಆಗಸ್ಟ್‌ನಿಂದೀಚೆಗೆ, ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯು ಬಸ್‌ಗಳಿಗೆ ಬಾಡಿ ಕಟ್ಟುವ ಕೆಲಸ ಕಾರ್ಯಗಳಲ್ಲಿ ಸದರಿ ಕಂಪೆನಿಯು ನಿರತವಾಗಿದೆ. ಆದರೆ ಕಂಪೆನಿಯು ತೀವ್ರ ನಷ್ಟದಲ್ಲಿದ್ದು ಹಲವಾರು ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಕಚ್ಚಾ ಪದಾರ್ಥಗಳ ಮುಗ್ಗಟ್ಟಿನಿಂದಾಗಿ ಕೆಲಸದ ದರಗಳನ್ನು ಪರಿಷ್ಕರಣೆ ಮಾಡುವಂತೆ ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆಯನ್ನು ಕೇಳಿದ್ದರು. ಆದರೆ ದಿನಾಂಕ 1.4.89ರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ನೀಡಿರುವ ಪರಿಷ್ಕೃತ ದರಗಳು ತೃಪ್ತಿಕರವಾಗಿಲ್ಲ. ಅಲ್ಲದೇ ಕೊಡುವ ಎಲ್ಲಾ ಕೆಲಸಗಳನ್ನು ಪೂರೈಸಲು ಅಗತ್ಯವಾದ ನಿರ್ವಹಣಾ ಬಂಡವಾಳ ಕೂಡ ಸದರಿ ಸಂಸ್ಥೆಗೆ ಇರುವುದಿಲ್ಲವಾದ್ದರಿಂದ ಕಂಪನಿಯು ಹೊಂದಾಣಿಕೆ ಮಾಡುವುದು ಕಷ್ಟ ಸಾಧ್ಯವಾಗಿದೆ. 27.6.88ರಲ್ಲಿ ಸರ್ಕಾರ (ಕೈಗಾರಿಗಾ ಇಲಾಖೆ) ಹೊರಡಿಸಿರುವ ಆದೇಶದ ಪ್ರಕಾರ ಕಿಂಕೋ ಕಂಪನಿಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಂಗ ಸಂಸ್ಥೆಯೆಂದು ಪರಿವರ್ತಿಸಲಾಗಿದ್ದು, 116.49 ಲಕ್ಷ ರೂಪಾಯಿಗಳನ್ನು ಸಹ ಭಾಗಿತ್ವ ನಿಧಿಯೆಂದು ಕೆಳಕಂಡ ಷರತ್ತುಗಳ ಮೇಲೆ ಕಿಂಕೋಗೆ ಬಿಡುಗಡೆ ಮಾಡುವ ಪ್ರಸ್ತಾಪವಿದೆ.

1) ಕಿಂಕೋ ಕಂಪೆನಿಯು, ತನ್ನ ಎಲ್ಲಾ ಉತ್ಪಾದನೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಎಲ್ಲಾ ಅಗತ್ಯಗಳನ್ನು ಪೂರೈಸಲು ಸನ್ನದ್ಧವಾಗಬೇಕು.
2) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು, ರಸ್ತೆ ಸಾರಿಗೆ ನಿಗಮದ ಅಧಿನಿಯಮದ ಪ್ರಕಾರ ಅಂಗ ಸಂಸ್ಥೆಯೊಂದನ್ನು ರಚಿಸಿ, ಕಿಂಕೋ ಕಂಪೆನಿಯು ಆಡಳಿತವನ್ನು ವಹಿಸಿಕೊಳ್ಳಲು ಪ್ರಮುಖ ಪಾತ್ರ ವಹಿಸಬೇಕು.
3) ಕಿಂಕೋ ಕಂಪೆನಿಯ ಆಡಳಿತದಲ್ಲಿ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಉಪಾಧ್ಯಕ್ಷರು ಹಾಗೂ ನಿರ್ವಾಹಕ ನಿರ್ದೇಶಕರು ಆಡಳಿತ ಮಂಡಳಿಯ ಅಧ್ಯಕ್ಷರಾಗಿಯೂ ಮುಖ್ಯ ಲೆಕ್ಕಪತ್ರ ಅಧಿಕಾರಿಗಳು ಹಾಗೂ ಮುಖ್ಯ ತಾಂತ್ರಿಕ ಇಂಜಿನಿಯರುಗಳು ನಿರ್ದೇಶಕರಾಗಿಯೂ ಅಲ್ಲದೆ ಮತ್ತಿತರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಸಂಸ್ಥೆಯ ನಿರ್ವಾಹಕ ನಿರ್ದೇಶಕರಾಗಿರುವಂತೆ